# ಕರ್ನಾಟಕ ವಿಧಾನ ಪರಿಷತ್

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 45(02)
**ಸದಸ್ಯರ ಹೆಸರು** : ಶ್ರೀ ಜಗದೇವ್ ಗುತ್ತೇದಾರ್ (ವಿಧಾನಭಾ ಕ್ಷೇತ್ರ)
**ಉತ್ತರಿಸುವ ದಿನಾಂಕ** : 08.12.2025.
**ಉತ್ತರಿಸುವ ಸಚಿವರು** : ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ರಬ್ಬರ್, ಟೀ ಮತ್ತು ಕಾಫಿ ಎಸ್ಟೇಟ್‌ಗಳ ನಿರ್ಮಾಣಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಿದ ಅರಣ್ಯ ಭೂಮಿ ಎಷ್ಟು? | ರಾಜ್ಯದಲ್ಲಿ ರಬ್ಬರ್, ಟೀ ಮತ್ತು ಕಾಫಿ ಎಸ್ಟೇಟ್‌ಗಳ ನಿರ್ಮಾಣಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಿದ ಅರಣ್ಯ ಭೂಮಿ ಒಟ್ಟು 3519.02 ಹೆಕ್ಟೇರ್. |
| (ಆ) | ಎಷ್ಟು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ ಮತ್ತು ಎಷ್ಟು ವರ್ಷಗಳಿಗೆ ಗುತ್ತಿಗೆ ನೀಡಲಾಗಿದೆ (ಕಂಪನಿಗಳ ವಿವರಗಳನ್ನು ನೀಡುವುದು) | ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ. |
| (ಇ) | ಗುತ್ತಿಗೆ ಹಣವನ್ನು ಬಾಕಿ ಉಳಿಸಿಕೊಂಡಿರುವ ಕಂಪನಿಗಳು ಎಷ್ಟು; ಹಾಗೂ ಅವುಗಳ ಮೊತ್ತವೆಷ್ಟು; | ಗುತ್ತಿಗೆ ಹಣವನ್ನು ಬಾಕಿ ಉಳಿಸಿಕೊಂಡಿರುವ ಕಂಪನಿಗಳ ವಿವರ ಈ ಕೆಳಕಂಡಂತಿದೆ. |

| ವಿಭಾಗ | ಕಂಪನಿ ಹೆಸರು | ಸರ್ಕಾರಕ್ಕೆ ಪಾವತಿಸ ಬೇಕಾದ ಮೊತ್ತ (ರೂ.ಲಕ್ಷ ಗಳಲ್ಲಿ) |
|---|---|---|
| ಮಡಿಕೇರಿ | ನೀಲಂಬೂರು ರಬ್ಬರ್ | 130.22 |
| | ಥೋಮಸನ್ ಪ್ಲಾಂಟೇಷನ್ (ಇಂಡಿಯಾ) ಪ್ರೈವೇಟ್ ಲಿ. | 91.29 |
| | ಮರ್ಕರ ರಬ್ಬರ್ ಲಿಮಿಟೆಡ್ | 454.24 |
| ವಿರಾಜಪೇಟೆ | ಪೋರ್ಟ್ ಲ್ಯಾಂಡ್ ರಬ್ಬರ್ ಕಂಪನಿ | 224.99 |
| | ಟಾಟಾ ಕಾಫಿ ಲಿಮಿಟೆಡ್ | 514.21 |
| | ಮೆ :ಗ್ಲೇನ್ ಲೋರೆನ್ ಪ್ಲಾಂಟೇಷನ್ಸ್ ಪ್ರೈವೇಟ್ ಲಿಮಿಟೆಡ್ | 51.86 |
| ಬಿಆರ್ ಟಿ ಹುಲಿ ಸಂರಕ್ಷಿತ ಪ್ರದೇಶ ಚಾಮರಾಜ ನಗರ | ಮೆ: ನೀಲಗಿರಿ ಪ್ಲಾಂಟೇಷನ್ ಲಿಮಿಟೆಡ್, ಹೊನ್ನಮೇಟಿ | 110.30 |
| | ಬಿಳಿಗಿರಿ ರಂಗನ ಕಾಫಿ ಎಸ್ಟೇಟ್, ಬೇಡಗುಳಿ | 9.10 |
| | ಎಮರಾಲ್ಡ್ ಹೆವೆನ್ ಎಸ್ಟೇಟ್, ಬೇಡಗುಳಿ | 2.12 |
| | **ಒಟ್ಟು** | **1588.33** |

| | | |
|---|---|---|
| (ಈ) | ಗುತ್ತಿಗೆ ಅವಧಿ ಮುಗಿದರೂ ಅರಣ್ಯ ಭೂಮಿಯನ್ನು ತೆರವುಗೊಳಿಸದಿರಲು ಕಾರಣವೇನು? | 1. ಗುತ್ತಿಗೆ ನೀಡಿರುವ ಅರಣ್ಯ ಭೂಮಿಯನ್ನು ಹಿಂದಿರುಗಿಸಲು ಹಾಗೂ ಗುತ್ತಿಗೆ ಹಣ ಮತ್ತು ಬಾಕಿ ವಸೂಲಾತಿಗಳನ್ನು ಪಾವತಿಸಲು ಗುತ್ತಿಗೆದಾರರಿಗೆ ನೋಟೀಸ್ ನೀಡಲಾಗಿದೆ. ಗುತ್ತಿಗೆದಾರರಿಗೆ ನೀಡಲಾಗಿರುವ ನೋಟೀಸ್‌ಗಳ ವಿರುದ್ಧವಾಗಿ ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿರುತ್ತದೆ. ನ್ಯಾಯಾಲಯದ ಪ್ರಕರಣ ವಿಚಾರಣಾ ಹಂತದಲ್ಲಿದೆ.<br><br>2. ವಿವಿಧ ಉದ್ದೇಶಗಳಿಗಾಗಿ ಅರಣ್ಯ ಜಮೀನುಗಳನ್ನು ಗುತ್ತಿಗೆ ನೀಡಿರುವ ಪ್ರಕರಣಗಳ ಪರಿಶೀಲನೆ/ಗೇಣಿ ವಸೂಲಾತಿ/ ಅರಣ್ಯ ಪ್ರದೇಶಗಳನ್ನು ಇಲಾಖೆಗೆ ಹಿಂಪಡೆಯುವ ಬಗ್ಗೆ ಪರಿಶೀಲಿಸಲು ಹಾಗೂ ನ್ಯಾಯಾಲಯದಲ್ಲಿರುವ ಪ್ರಕರಣಗಳ ಪರಿಶೀಲನೆ ಹಾಗೂ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ಹಾಗೂ ನ್ಯಾಯಾಲಯದ ಆದೇಶಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ ಅಪಜೀ 47 ಎಫ್‌ಎಲ್‌ಎಲ್ 2024, ದಿನಾಂಕ: 23.01.2024ರಲ್ಲಿ ಕಾರ್ಯಪಡೆಯನ್ನು ರಚಿಸಲಾಗಿದೆ.<br><br>3. ಕಾರ್ಯಪಡೆಯು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹಲವಾರು ಸಭೆಗಳನ್ನು ನಡೆಸಿ ಎಲ್ಲಾ ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ಅಡ್ವೋಕೇಟ್ ಜನರಲ್ ಕಛೇರಿಗೆ ಒದಗಿಸಲಾಗಿರುತ್ತದೆ.<br><br>4. ನ್ಯಾಯಾಲಯದಲ್ಲಿ ಈ ಪ್ರಕರಣಗಳ ತ್ವರಿತ ಇತ್ಯರ್ಥಕ್ಕಾಗಿ ಸರ್ಕಾರದ ಪರವಾಗಿ ಅಡ್ವಕೇಟ್ ಜನರಲ್ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿದೆ. |

**ಸಂಖ್ಯೆ: FEE/267/FLL/2025**

(ಈಶ್ವರ ಬಿ. ಖಂಡ್ರೆ)

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

## ಅನುಬಂಧ-1

ಕೊಡಗು ಹಾಗೂ ಚಾಮನಗರ ವೃತ್ತಗಳಲ್ಲಿ ಟೀ ಮತ್ತು ಕಾಫಿ ಎಸ್ಟೇಟ್‌ಗಳ ನಿರ್ಮಾಣಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಿದ ವರ್ಷಗಳ ವಿವರ

| ಕ್ರ. ಸಂ. | ವೃತ್ತ | ರಬ್ಬರ್ ಕಂಪೆನಿಗಳ ಹೆಸರು | ಗುತ್ತಿಗೆ ನೀಡಿದ ವರ್ಷ (99 ವರ್ಷಗಳಿಗೆ) |
|---|---|---|---|
| 1 | ಕೊಡಗು | ಮರ್ಕರ | 26.07.1911 |
| | | | 06.03.1915 |
| 2 | | ನೀಲಂಬೂರು | 30.05.1910 |
| | | | 30.05.1910 |
| | | | 30.05.1910 |
| | | | 30.10.1910 |
| | | | 30.10.1910 |
| 3 | | ಥಾಮ್ಸನ್ (ಕೊಚ್ಚಿನ್) | 27.10.1913 |
| | | | 12.09.1918 |
| | | | 31.03.1926 |
| | | | 24.10.1929 |
| 4 | | ಪೋರ್ಟ್‌ಲ್ಯಾಂಡ್ | 06.10.1913 |
| 5 | | ಗ್ಲೆನ್ ಲೋರ್ನಾ ಪ್ಲಾಂಟೇಷನ್ | 11.11.1914 |
| 6 | | ಟಾಟಾ ಕಾಫಿ ಲಿಮಿಟೆಡ್ | 12.11.1914 |
| 7 | ಚಾಮರಾಜನಗರ | ಮ\|\| ನೀಲಗಿರಿ ಪ್ಲಾಂಟೇಷನ್ ಲಿಮಿಟೆಡ್, ಹೊನ್ನಮೇಟಿ | 1946 |
| 8 | | ಬಿಳಿಗಿರಿ ರಂಗನ ಕಾಫಿ ಎಸ್ಟೇಟ್, ಬೇಡಗುಳಿ | 22.11.1944 |
| 9 | | ಎಮರಾಲ್ಡ್ ಹವನ್ ಎಸ್ಟೇಟ್. ಬೇಡಗುಳಿ | 14.08.1952 |

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಭೂ ದಾಖಲೆ)